# ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ

(ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ಭಾರತ ಸರ್ಕಾರ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿ)

# 2ನೇ ವಾರ್ಷಿಕ ವರದಿ

## 2016 - 17

ನೋಂದಾಯಿತ ಕಛೇರಿ :
ಬೀಜರಾಜ ಸೀಡ್ಸ್ ಕಾಂಪ್ಲೆಕ್ಸ್, 2ನೇ ಮಹಡಿ, ಸೌಥ್ ಬ್ಲಾಕ್,
ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು– 560024

KSPDCL

# ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ ನಿಯಮಿತ ಮಂಡಳಿಯ ನಿರ್ದೇಶಕರು

| ಕ್ರ. ಸಂ. | ನಿರ್ದೇಶಕರ ಹೆಸರುಗಳು | |
|---|---|---|
| 1. | **ಶ್ರೀ ಜಿ.ವಿ.ಬಲರಾಮ್,**<br>ಅಧ್ಯಕ್ಷರು, ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560 001. | ಅಧ್ಯಕ್ಷರು |
| 2. | **ಶ್ರೀ ಚಿನ್ನಯ್ಯ ಕಣ್ಣನ್,**<br>ನಿರ್ದೇಶಕರು (ಹಣಕಾಸು), ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ನಂ. ಡಿ–3, 1ನೇ ಮಹಡಿ, ಎ–ವಿಂಗ್, ಜಿಲ್ಲಾ ಕೇಂದ್ರ, ಸಾಕೇತ್, ನವದೆಹಲಿ–110 017. | ನಿರ್ದೇಶಕರು |
| 3. | **ಶ್ರೀ ರಮೇಶ್ ಕುಮಾರ್ ಕುರುಪ್ಪತ್,**<br>ಪ್ರಧಾನ ವ್ಯವಸ್ಥಾಪಕರು, ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ನಂ. ಡಿ–3, 1ನೇ ಮಹಡಿ, ಎ–ವಿಂಗ್, ಜಿಲ್ಲಾ ಕೇಂದ್ರ, ಸಾಕೇತ್, ನವದೆಹಲಿ–110 017 | ನಿರ್ದೇಶಕರು |
| 4. | **ಶ್ರೀ ಎನ್.ಸುರೇಶ್,**<br>ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ.<br>ನಂ. 39, "ಶಾಂತಿ ಗೃಹ"ಭಾರತ್ ಸ್ಕೌಟ್ಸ್ & ಗೈಡ್ಸ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560 001. | ನಿರ್ದೇಶಕರು |

# ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಕೆ.ಆರ್.ಇ.ಡಿ.ಎಲ್. ಮತ್ತು ಭಾರತ ಸರ್ಕಾರದ ಎಸ್.ಇ.ಸಿ.ಐ. ಜಂಟಿ ಸಹಭಾಗಿತ್ವದ ಕಂಪನಿ)

## ಸೂಚನೆ

ಎಲ್ಲ ಪಾಲುದಾರರಿಗೆ,

ಈ ಕೆಳಗಿನ ವ್ಯವಹಾರಗಳನ್ನು ನಡೆಸುವ ಸಲುವಾಗಿ ಕಂಪನಿಯ 02ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ: 09ನೇ ಅಕ್ಟೋಬರ್, 2017ರಂದು ಮಧ್ಯಾಹ್ನ 01–00 ಗಂಟೆಗೆ "ಬೀಜರಾಜ ಸೀಡ್ ಕಾಂಪ್ಲೆಕ್ಸ್, 2ನೇ ಮಹಡಿ, ದಕ್ಷಿಣ ಭಾಕ, ಹೆಬ್ಬಾಳ, ಬೆಂಗಳೂರು–560024" ಕಂಪನಿಯ ನೋಂದಾಯಿತ ಕಛೇರಿ ಇಲ್ಲಿ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

**ಸಾಮಾನ್ಯ ವ್ಯವಹಾರ :**

01. ಕಂಪನಿ ಕಾಯಿದೆ 2013ರ ಅಧಿನಿಯಮ 143(6)(ಬಿ) ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರಿಂದ ಸ್ವೀಕರಿಸಲಾದ ಟಿಪ್ಪಣಿಗಳೊಂದಿಗೆ 31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಲೆಕ್ಕಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ಮತ್ತು ನಿರ್ದೇಶಕರ ವರದಿಗಳನ್ನು ಸ್ವೀಕರಿಸಲು, ಪರಿಗಣಿಸಲು ಮತ್ತು ಅಳವಡಿಸಿಕೊಳ್ಳುವುದು.

02. 2017–18ನೇ ಆರ್ಥಿಕ ವರ್ಷಕ್ಕೆ ಭಾರತದ ನಿಯಂತ್ರಕ ಮತ್ತು ಮಹಾಲೇಖಾಪರೀಕ್ಷಕರು, ನವದೆಹಲಿ ಇವರಿಂದ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಗೊಂಡ ಮೆ: ಎಂ.ಸಾಂಬಸಿವ ರಾವ್ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟಂಟ್ಸ್, ಬೆಂಗಳೂರು ಇವರ ಸಂಭಾವನೆಯನ್ನು ನಿಗದಿಪಡಿಸಲು ನಿರ್ದೇಶಕ ಮಂಡಳಿಗೆ ಅಧಿಕಾರ ನೀಡುವುದು.

ಮಂಡಳಿಯ ಆದೇಶಾನುಸಾರ

ಸಹಿ/–

(ಸಿ.ಎಸ್ .ಶಶಿಧರ ಜಿ.ಎಸ್.)

ವೃತ್ತಿನಿರತ ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು

ದಿನಾಂಕ : 06.10.2017

**ಟಿಪ್ಪಣಿ :**

01. ಸಭೆಗೆ ಹಾಜರಾಗಿ ಮತ ಚಲಾಯಿಸಲು ಹಕ್ಕುಳ್ಳವರಾಗಿರುವ ಸದಸ್ಯರು ತಮ್ಮ ಬದಲಾಗಿ ಹಾಜರಾಗಿ ಮತ ಚಲಾಯಿಸಲು ಪ್ರತಿನಿಧಿ (ಪ್ರಾಕ್ಸಿ)ಯನ್ನು ನೇಮಕ ಮಾಡಲು ಹಕ್ಕುಳ್ಳವರಾಗಿದ್ದು ಮತ್ತು ಈ ಪ್ರತಿನಿಧಿಯು (ಪ್ರಾಕ್ಸಿ) ಕಂಪನಿಯ ಸದಸ್ಯರಾಗಿರಲೇಬೇಕೆಂದೇನಿಲ್ಲ.

02. ನಿಗಮವು ಒಂದು ಸರ್ಕಾರಿ ನಿಗಮವಾಗಿರುವುದರಿಂದ, ಕಂಪನಿಗಳ ಕಾಯಿದೆ, 2013ರ ಅಧಿನಿಯಮ 139(2)ರ ಉಪ ಪ್ರಕರಣ (5)ರ ಪ್ರಕಾರ ಭಾರತದ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರು, ನವದೆಹಲಿ ಇವರು ದಿನಾಂಕ: 04.08.2017ರ ಪತ್ರದಲ್ಲಿ ಮೆ: ಸಾಂಬಸಿವ ರಾವ್ ಮತ್ತು ಕಂಪನಿ, ಚಾರ್ಟರ್ಡ್ ಅಕೌಂಟಂಟ್ಸ್, ಬೆಂಗಳೂರು ಇವರನ್ನು 2017–18ನೇ ಹಣಕಾಸು ವರ್ಷಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ನೇಮಕಗೊಳಿಸಿರುತ್ತಾರೆ.